ರಾಜುಭಯ್ಯಾಗೆ ಹೇಳಿ ಒಂದೆರಡು ಬ್ಯಾಗುಗಳನ್ನು ಹಿಡಿದು ತಾರಾನಾಥನೊಂದಿಗೆ ಆನಂದ ವಿಹಾರ್ ಬಸ್‌ಸ್ಟ್ಯಾಂಡ್ ಕಡೆ ನಡೆದ. ಆನಂದಿ ಕೊಟ್ಟಿದ್ದ ಬೊಂಬೆಯನ್ನು ಬ್ಯಾಗಿನಲ್ಲಿ ಇಟ್ಟುಕೊಂಡಿದ್ದ. ಬಸ್‌ಸ್ಟ್ಯಾಂಡ್ ತಲುಪಿದಾಗ ಅವನ ಕಣ್ಣುಗಳನ್ನು ಅವನೇ ನಂಬದಾದ. ಅಷ್ಟೊಂದು ಜನಸಂಖ್ಯೆಯನ್ನು ಒಂದೇ ಕಡೆ ಅವನೆಂದೂ ನೋಡಿರಲಿಲ್ಲ. ಐವತ್ತು ಸಾವಿರಕ್ಕಿಂತಲೂ ಅಧಿಕ ಜನ ಇದ್ದಿರಬಹುದು. ಎಲ್ಲರ ಮುಖಗಳಲ್ಲೂ ತಮ್ಮ ತಮ್ಮ ಊರುಗಳನ್ನು ಸೇರಿಕೊಳ್ಳುವ ಧಾವಂತ. ಬಸ್ಸುಗಳನ್ನು ಹತ್ತಲು ಇನ್ನಿಲ್ಲದಂತೆ ನೂಕು ನುಗ್ಗಲು. ಮಕ್ಕಳು ಇದ್ದವರ ಸ್ಥಿತಿಯಂತೂ ಘನಘೋರವಾಗಿತ್ತು. ಇಂಥ ಸಮಯದಲ್ಲೇ ಪ್ರತಿಯೊಬ್ಬ ಮನುಷ್ಯನ ಸ್ವಾರ್ಥ ತನ್ನೆಲ್ಲ ಗುಣ ಸ್ವರೂಪಗಳೊಂದಿಗೆ ಅನಾವರಣಗೊಳ್ಳುವುದು. ಪಟ್ನಾದ ಬಸ್ಸು ಬರುತ್ತಲೇ ತಾರಾನಾಥ ಚಾಕಚಕ್ಯತೆಯಿಂದ ಹತ್ತಿ ಅಣ್ಣನಿಗೂ ಸೀಟು ಹಿಡಿದಿದ್ದ. ಬಸ್ಸು ಬಸ್‌ಸ್ಟ್ಯಾಂಡ್ ಬಿಟ್ಟು ಹೋಗುತ್ತಿತ್ತು. ಆಗ ಬಸ್‌ಸ್ಟ್ಯಾಂಡ್ ದ್ವಾರದಲ್ಲಿ ಐದಾರು ಜನರೊಂದಿಗೆ ಆನಂದಿ ಬಸ್‌ಸ್ಟ್ಯಾಂಡ್ ಪ್ರವೇಶಿಸುತ್ತಿರುವುದು ಕಣ್ಣಿಗೆ ಬಿದ್ದಿತ್ತು. ಸೀರೆ ತೊಟ್ಟು ತಲೆ ತುಂಬಾ ಹೂ ಮುಡಿದಿದ್ದಳು. ಕ್ಷಣ ಏನು ಮಾಡಬೇಕೆಂದು ಯೋಚಿಸುವಷ್ಟರಲ್ಲಿ ಬಸ್ಸು ವೇಗವಾಗಿ ಸಾಗಿಬಿಟ್ಟಿತ್ತು. ಕಿಟಕಿಯಿಂದ ಹಿಂತಿರುಗಿ ನೋಡಿದಾಗ ಜನಸಂದಣಿಯಲ್ಲಿ ಆನಂದಿ ಕರಗಿ ಹೋಗಿದ್ದಳು! ಆನಂದಿ ಎಂದು ಕೂಗಬೇಕೆಂದುಕೊಂಡವನ ಮಾತುಗಳು ಗಂಟಲಲ್ಲಿಯೇ ಮೌನವಾಗಿ ಉಳಿದವು.

ಪಟ್ನಾದಲ್ಲಿ ಬಸ್ಸು ಇಳಿದು, ಅಲ್ಲಿಂದ ಲಗ್ಗೇಜು ಲಾರಿ ಹಿಡಿದು ಊರು ತಲುಪಲು ಮೂರು ದಿನ ಹಿಡಿಸಿತ್ತು. ಖಾಲಿ ಖಾಲಿಯಾಗಿದ್ದ ಊರು ಈಗ ಜನರಿಂದ ತುಂಬಿ ತುಳುಕುತ್ತಿತ್ತು. ಕೆಲಸಕ್ಕೆಂದು ಬೇರೆ ಬೇರೆ ಪಟ್ಟಣಗಳಿಗೆ ಹೋಗಿದ್ದವರೆಲ್ಲ ಊರಿಗೆ ಹಿಂತಿರುಗಿ ಬಂದಿದ್ದರು. ಊರಿನಲ್ಲೂ ಎಲ್ಲರ ಬಾಯಲ್ಲೂ ಕೊರೊನಾ ಎಂಬ ವಿಚಿತ್ರ ಕಾಯಿಲೆಯದೇ ಮಾತು. ಟಿವಿಗಳಲ್ಲಂತೂ ಅದರದೇ ಸುದ್ದಿ. ಇನ್ನೂ ಬೇರೆ ಬೇರೆ ಪಟ್ಟಣಗಳಲ್ಲಿದ್ದ ವಲಸೆ ಕಾರ್ಮಿಕರು ತಮ್ಮ ತಮ್ಮ ಊರುಗಳಿಗೆ ನಡೆದೇ ಹೋಗುತ್ತಿರುವ ದೃಶ್ಯಗಳು ಟಿವಿಗಳಲ್ಲಿ ಬಿತ್ತರವಾಗುತ್ತಲೇ ಇದ್ದವು. ಪಟ್ಟಣಗಳಿಂದ ವಾಪಸ್ಸು ಬಂದವರು ಮುಂದೆ ಹಿಂತಿರುಗಿ ಹೋಗುವುದೋ ಇಲ್ಲ ಹಳ್ಳಿಯಲ್ಲಿಯೇ ನೆಲೆಗೊಳ್ಳುವುದೋ ಎಂಬ ಚರ್ಚೆಗಳಲ್ಲಿ ತೊಡಗಿದ್ದರು. ಪಟ್ಟಣ ವಾಸಕ್ಕೆ ಒಗ್ಗಿಹೋಗಿದ್ದ ಕೆಲವರಿಗೆ ಒಂದು ತಿಂಗಳಲ್ಲಿ ಹಳ್ಳಿಯ ಬದುಕು ಕಷ್ಟವೂ, ಬೇಸರವೂ ಅನ್ನಿಸತೊಡಗಿತ್ತು. ಪಕ್ಕದ ಉತ್ತರ ಪ್ರದೇಶದಲ್ಲಿ ನಡೆದ ಘಟನೆಯೊಂದು ಟಿವಿಯಲ್ಲಿ ಪ್ರಸಾರವಾದದ್ದನ್ನು ನೋಡಿದ ರಾಮ್ ಲಾಲನಿಗೆ ಹೃದಯ ಭಾರವಾಗಿತ್ತು. ಉತ್ತರ ಪ್ರದೇಶದಲ್ಲಿ ಯುವಕನೊಬ್ಬ ತನ್ನ ಊರಿಂದ ನೂರು ಮೈಲಿ ದೂರದ ಇನ್ನೊಂದು ಊರಿನ ಹುಡುಗಿಯನ್ನು ಪ್ರೀತಿಸಿರುತ್ತಾನೆ. ಯುವಕನ ತಾಯಿ ಮದುವೆಗೆ ಒಪ್ಪಿರುತ್ತಾಳೆ. ಅಲ್ಲದೆ ಆಕೆ ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿದ್ದು ತಿಂಗಳೊಪ್ಪತ್ತಿನಲ್ಲಿ ಆಕೆ ಸಾಯುತ್ತಾಳೆಂದು ಡಾಕ್ಟರ್ ಹೇಳಿರುತ್ತಾರೆ. ತನ್ನ ಮಗನ ಮದುವೆ ನೋಡಿ ಸಾಯುವ ಬಯಕೆ ಆಕೆಯದು. ಆ ಯುವಕ ಸೈಕಲ್ಲಿನಲ್ಲಿಯೇ ನೂರು ಮೈಲಿ ಸಾಗಿ ಹುಡುಗಿಯ ಊರಿಗೆ ಹೋಗಿ ಸರಳ ಮದುವೆ ಮಾಡಿಕೊಂಡು ಹೆಂಡತಿಯನ್ನು ಸೈಕಲ್ಲಿನಲ್ಲಿಯೇ ಕೂರಿಸಿಕೊಂಡು ಹಿಂತಿರುಗಿ ತನ್ನ ಊರಿಗೆ ಬಂದು ತಾಯಿಯ ಕಾಲುಗಳಿಗೆ ಇಬ್ಬರೂ ನಮಸ್ಕರಿಸುತ್ತಾರೆ. ಕ್ಯಾನ್ಸರ್ ಕಾಯಿಲೆಯ ನೋವಿನಲ್ಲೂ ಯುವಕನ ತಾಯಿಯ ಕಣ್ಣುಗಳು ಸಂತೋಷದಿಂದ ತುಂಬಿಕೊಳ್ಳುತ್ತವೆ. ಈ ಸುದ್ದಿಯನ್ನು ದೃಶ್ಯಗಳ ಸಮೇತ ನೋಡಿದ ರಾಮ್ ಲಾಲನಿಗೆ ಆನಂದಿ ಮತ್ತೆ ಮತ್ತೆ ಕಾಡತೊಡಗಿದಳು.

ಹಾಗೂ ಹೀಗೂ ಎರಡೂವರೆ ತಿಂಗಳು ಕಳೆದುಹೋಗಿತ್ತು. ಆರ್ಥಿಕತೆಯನ್ನು ಪುನಶ್ಚೇತನಗೊಳಿಸುವ ಸಲುವಾಗಿ ಸರ್ಕಾರಗಳು ಲಾಕ್ ಡೌನ್ ಸಡಿಲಗೊಳಿಸಿದ್ದವು. ಕೆಲವು ಶರತ್ತುಗಳೊಂದಿಗೆ ಬಸ್ಸು, ರೈಲುಗಳ ಸಂಚಾರವನ್ನು ಪ್ರಾರಂಭಿಸಲಾಯಿತು. ಈ ಕಾಯಿಲೆಯಿಂದ ರಕ್ಷಿಸಿಕೊಳ್ಳಲು